E Gov

# ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/10/ಚಿಕಫ/2014-15. /3474

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ:07-01-2015

## ಸುತ್ತೋಲೆ

ವಿಷಯ: ಚಿತ್ರಕಲಾ ಶಾಲೆಗಳ ಲೆಕ್ಕ ತಪಾಸಣೆ ಕೈಗೊಳ್ಳುವ ವಿಚಾರವಾಗಿ ಸಂಸ್ಥೆಗಳ ವಾರ್ಷಿಕ ಲೆಕ್ಕ ಪತ್ರಗಳ ಸಿ.ಎ. ದೃಡೀಕರಣ ವರದಿ ಹಾಗೂ ಹಣ ಬಳಕೆ ಪ್ರಮಾಣ ಪತ್ರ ಕಳುಹಿಸುವ ಬಗ್ಗೆ.

*****

ಅನುದಾನಿತ ಚಿತ್ರಕಲಾ ಕಾಲೇಜುಗಳು ಪ್ರಸ್ತುತ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. ಕಛೇರಿಯ ನಿಯಂತ್ರಣಕ್ಕೆ ಒಳಪಟ್ಟಿದ್ದು, ಸದರಿ ಕಾಲೇಜುಗಳಿಗೆ ಶೇಕಡ 100 ರಷ್ಟು ಸಹಾಯ ಅನುದಾನ ನೀಡಲಾಗುತ್ತಿದೆ. ಆದರೆ ಸದರಿ ಕಾಲೇಜುಗಳು ಅನುದಾನ ಸಂಹಿತೆ ಅನುಸಾರವಾಗಿ ಸಂಸ್ಥೆಗಳ ವಾರ್ಷಿಕ ಲೆಕ್ಕ ವರದಿ ಮತ್ತು ಸ್ವೀಕೃತಿ ಮತ್ತು ಪಾವತಿ ತ:ಖ್ತೆ ಆದಾಯ ಮತ್ತು ವೆಚ್ಚದ ತ:ಖ್ತೆ ಹಾಗೂ ಬ್ಯಾಲೆನ್ಸ್ ಶೀಟ್, ಅನುದಾನ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕಾಗಿದ್ದು, ಈ ವರೆಗೆ ಯಾವುದೇ ಸಂಸ್ಥೆಯಿಂದ ವಾರ್ಷಿಕ ಲೆಕ್ಕ ವರದಿ ಹಾಗೂ ಬಳಕೆ ಪ್ರಮಾಣ ಪತ್ರಗಳು ಬಂದಿರುವುದಿಲ್ಲ.

ಈ ಇಲಾಖೆಯ ಆಡಳಿತ ವ್ಯಾಪ್ತಿಗೆ ಒಳಪಟ್ಟ ದಿನಾಂಕ: 2009-10 ರಿಂದ 2013-14ರ ಸಾಲಿನ ವರೆಗಿನ ಸಂಸ್ಥೆಯ ಲೆಕ್ಕ ಪತ್ರಗಳನ್ನು ಚಾರ್ಟೆಡ್ ಅಕೌಂಟೆಟ್ ರವರಿಂದ ಲೆಕ್ಕ ಪರಿಶೋಧನೆಗೊಳಪಡಿಸಿ, ಸಂಸ್ಥೆಯ ದೃಢೀಕೃತ C.A .ವರದಿ (C.A.Report) ಯನ್ನು ಮತ್ತು ಅನುದಾನ ಬಳಕೆ ಮಾಡಿರುವ ಬಗ್ಗೆ ಉಪಯುಕ್ತತಾ ಪ್ರಮಾಣ ಪತ್ರಗಳನ್ನು ಒಂದು ತಿಂಗಳೊಳಗೆ ಈ ಕಛೇರಿಗೆ ಕಳುಹಿಸಲು ತಿಳಿಸಲಾಗಿದೆ. ಹಾಗೂ C.A . ವರದಿ (C.A.Report) ಯನ್ನು ಈ ಕಛೇರಿಗೆ ಕಳುಹಿಸಿದ ನಂತರ ಈ ಕಛೇರಿಯಿಂದಲೆಕ್ಕ ತಪಾಸಣೆ ಕೈಗೊಳ್ಳಲಾಗುವುದು, ಲೆಕ್ಕ ತಪಾಸಣೆಗೆ ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಸಿದ್ದಪಡಿಸಿಟ್ಟು ಕೊಳ್ಳಲು ಸೂಚಿಸಲಾಗಿದೆ.

1. ಪ್ರಸ್ತುತ ನಿರ್ವಹಿಸುತ್ತಿರುವ ನಗದು ವಹಿ/ಬ್ಯಾಂಕ್ ಪಾಸ್ ಪುಸ್ತಕ ಅಥವಾ ಬ್ಯಾಂಕ್ ಸ್ಟೇಟ್ಮೆಂಟ್ಸ್.
2. ಆಯಾ ವರ್ಷದ ವಿದ್ಯಾರ್ಥಿಗಳ ಪ್ರವೇಶ ಮತ್ತು ಈ ಪ್ರವೇಶಗಳಿಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ನೀಡಿರುವ ಅನುಮೋದನಾ ಪತ್ರ ಮತ್ತು ನಿರ್ವಹಿಸಿರುವ ಪ್ರವೇಶ ವಹಿ.
3. ವಿದ್ಯಾರ್ಥಿಗಳಿಂದ ಸಂಗ್ರಹಿಸಿರುವ ಶುಲ್ಕಗಳ ಸಂಬಂಧವಾಗಿ ನಿರ್ವಹಿಸಲಾಗುವ 'ಡಿಸಿಬಿ' ವಹಿ.
4. ವಿದ್ಯಾರ್ಥಿ ವೇತನದ ವಿವರ ಮತ್ತು ಬಟವಾಡೆ ವಹಿಗಳು.
5. ನಿರ್ವಹಣಾ ಅನುದಾನಕ್ಕೆ ಅರ್ಹವಾಗಿದ್ದಲ್ಲಿ, ವಿವಿಧ ಬಾಬ್ತು, ಖರ್ಚು:ವೆಚ್ಚಗಳ ವಿವರಗಳು, ದಾಸ್ತಾನು ವಹಿಗಳು.
6. ಇಲಾಖೆಯಿಂದ/ಸರ್ಕಾರದಿಂದ ಪಡೆದಿರುವ ಅನುದಾನದ ವಿವರಗಳು, ಆದೇಶದ ಪ್ರತಿಗಳುಮತ್ತು ನಿರ್ವಹಣಾ ವಹಿ.
7. ಸಿಬ್ಬಂದಿಯವರ ಸೇವಾ ಪುಸ್ತಕಗಳು.
8. ಮಾಹೆವಾರು ವೇತನ ಬಟವಾಡೆಯ ವಾರ್ಷಿಕ ವಿವರಣಾ ಪಟ್ಟಿ, ವೇತನ ಬಟವಾಡೆ ವಹಿ.
9. ಆಯಾ ವರ್ಷಗಳ ಚಾರ್ಟೆಡ್ ಅಕೌಂಟೆಂಟ್ ರವರಿಂದ ದೃಢೀಕೃತ ಲೆಕ್ಕ ಪರಿಶೋಧನ ವರದಿ.

ಇನ್ನು ಮುಂದೆ ಪ್ರತಿ ಆರ್ಥಿಕ ವರ್ಷದ ಅಂತ್ಯದಲ್ಲಿ ದೃಢೀಕೃತ C.A . ವಾರ್ಷಿಕ ಲೆಕ್ಕ ವರದಿಯನ್ನು ಏಪ್ರಿಲ್ 15 ರೊಳಗೆ ಈ ಕಛೇರಿಗೆ ಕಳುಹಿಸಲು ಹಾಗೂ ಅನುದಾನವನ್ನು ಉಪಯೋಗಿಸಿರುವ ಬಗ್ಗೆ ಉಪಯುಕ್ತತಾ ಪ್ರಮಾಣ ಪತ್ರವನ್ನು ಕರ್ನಾಟಕ ಆರ್ಥಿಕ ಸಂಹಿತೆ ಅನುಛೇಧ-161 ರಲ್ಲಿ ನಿಗಧಿ ಪಡಿಸಿರುವ ನಮೂನೆಯಲ್ಲಿ ಆಯಾ ವರ್ಷದ ಆರ್ಥಿಕ ವರ್ಷ ಮುಗಿದ ಆಗಸ್ಟ್ ಮಾಹೆಯೊಳಗೆ ಇಲಾಖೆಗೆ ಕಳುಹಿಸಲು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು,
9/1/15

ಪ್ರತಿಗಳು,

1. ಎಲ್ಲ ಚಿತ್ರಕಲಾ ಕಾಲೇಜುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
2. ಸಹಾಯಕ ನಿರ್ದೇಶಕರು, ಚಿತ್ರಕಲಾ ಘಟಕ ಇವರಿಗೆ ಮಾಹಿತಿಗಾಗಿ.
3. ಜಿ.ಆರ್.ಟಿ-2 ವಿಭಾಗಕ್ಕೆ ಮಾಹಿತಿಗಾಗಿ ಹಾಗೂ ಅನುದಾನ ಬಿಡುಗಡೆ ಮಾಡುವ ಮುನ್ನ ಉಪಯುಕ್ತತಾ ಪ್ರಮಾಣ ಪತ್ರವನ್ನು ಪಡೆಯಲು ಕ್ರಮ ಕೈಗೊಳ್ಳುವುದು.
4. ಯೋಜನಾ ವಿಭಾಗಕ್ಕೆ ಮಾಹಿತಿಗಾಗಿ.
5. ಇ-ಆಡಳಿತ ವಿಭಾಗಕ್ಕೆ ಮಾಹಿತಿ ಕಳುಹಿಸಲು.